Stray cases of attacks have occurred in Bangalore City Corporation area and other parts of the State. So far, there is no report of a death due to 'Flue' (influenza) anywhere in the State. No reports from other parts of Mysore have been received regarding spread of flue in an epidemic form.

In Bangalore City, with a view to check spread of flue, the Health Officer of the Corporation of the City of Bangalore has released a Press Note in important local newspapers regarding the spread of 'flue' the facts aboot flue, its symptoms thereto and the precautionery measures to be taken to control the virus infection. As already stated above all the Health Officers have been given detailed instructions by the State Director of Health and Family Planning Services and they have been alerted to take necessary remedial measures. Health staff of the Bangalore City Corporation and other areas in the State have been alerted similarly for taking necessary measures. Necessary medicines are stocked and provision for further purchases is made to meet the emergency by the Corporation. Necessary medicines are also available in Government Hospitals in the State and demands for more stocks, if received will be promptly complied with by the Government Medical Stores.

In conclusion, I may say that with due medical care and treatment there should be no cause for anxiety.

ಶ್ರೀ ಎನ್. ಎ. ಚನ್ನೇಗೌಡ.—ತಾವು ಹೇಳಿದಿರಿ ಯಾವ ಮರಣದ ವರ್ತಮಾನವೂ ಬಂದಿಲ್ಲ, ಔಷಧಿ ಕೊಟ್ಟಿದ್ದೇವೆ ಎಂದು. ಆದರೆ ಗ್ರಾಮಾಂತರ ಹಳ್ಳಿಗಳಲ್ಲಿ ಫ್ಲೂ ಇದೆ. ಆಫೀಸರುಗಳು ಎಲ್ಲಾ ಹಳ್ಳಿಗಳಿಗೂ ಹೋಗುವುದಕ್ಕಾಗುವುದಿಲ್ಲ. ಆದುದರಿಂದ ಈ ಔಷಧಿಗಳನ್ನು ಪಂಚಾಯಿತಿಗಳಿಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—15 ಸಾವಿರ ಜನರಿಗೆ ಒಂದು ಮೆಡಿಕಲ್ ಇನ್‌ಸ್ಟಿಟ್ಯೂಷನ್ ಇದೆ. ಮತ್ತು ಅಲ್ಲಿ ಮೆಡಿಕಲ್ ಆಫೀಸರು ಇದ್ದಾರೆ. ಔಷಧಿಗಳನ್ನು ನಾವು ಆಗಲೇ ಕಳುಹಿಸಿದ್ದೇವೆ. ಹೆಚ್ಚಿಗೆ ಬೇಕಾದರೆ ಕೊಡುವುದಕ್ಕೆ ತಯಾರಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಹೆಚ್.ಎಂ.ಟಿ. ಕೂಲಿಗಾರರು ಒಬ್ಬರು ಔಷಧಿ ಕೊಟ್ಟಮೇಲೆ ಸತ್ತು ಹೋಗಿದ್ದಾರೆ. ಅದು ತಮಗೆ ಗೊತ್ತಿದೆಯೇ ?

Mr. DEPUTY SPEAKER.—That has nothing to do with this call attention notice.

ಶ್ರೀ ಎಂ. ನಾಗಪ್ಪ.—ರಾಯಚೂರಿನಲ್ಲಿ ಫ್ಲೂ ಪ್ರಿವೆಂಟ್ ಮಾಡುವುದಕ್ಕೆ ದುಡ್ಡು ಕಳುಹಿಸಿದ್ದೀರಿ ? ನನಗೆ ಗೊತ್ತಿದ್ದ ಮಟ್ಟಿಗೆ ಉತ್ತರ ಕರ್ನಾಟಕ ಫ್ಲೂ ಇಂದ ಜಾಸ್ತಿ ಅಫೆಕ್ಟ್ ಆಗಿರುವುದರಿಂದ ಅಲ್ಲಿ ಹೆಚ್ಚು ಪ್ರಿವೆಂಟೀವ್ ಮೆಜರ್ಸ್ ಬೇಕಾಗುತ್ತದೆ. ಅದರ ಬಗ್ಗೆ ಮತ್ತೆ ಯೋಚನೆ ಮಾಡಲಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ದುಡ್ಡು ಕಳುಹಿಸಿ ಕೊಟ್ಟಿಲ್ಲ. ಔಷಧಿಗಳನ್ನು ಕೊಟ್ಟಿದ್ದೇವೆ. ಹೆಚ್ಚಿಗೆಬೇಕು ಎಂದು ಕೇಳಿದರೆ ಕೊಡುವುದಕ್ಕೆ ತಯಾರು ಇದ್ದೇವೆ.

(iv) *re* : **Attrocities committed by the Bidar Police on the students.**

Sri V. N. PATIL.—Sir, I call the attention of the Chief Minister to the atrocities committed by the Bidar police on the students.

Sri MANIKRAO PATIL (Deputy Minister for Home).—Sir, it is reported that at about 10-30 A.M. on 21st January 1970, about 500 students of B.V B. College, Bidar, took out a procession in the Town demanding reduction of rates of eatables in the hotels. When the procession reached Gung area, some miscreants pelted stones on Hotel "Upkar" causing damage to glass panes. The police promptly intervened and dispersed the students. A section of students reached Chatri junction and started pelting stones on Hotel "Alankar" and the employees of the hotel retaliated. They were dispersed by the Police. Later on, the students continued the procession to the Deputy Commissioner's Office, and after representing their grievances, they returned to Chatri junction and dispersed peacefully at about 1-30 P.M. The damage caused to both the hotels is estimated to be about Rs. 500. Two students sustained minor injuries.

A meeting of the representatives of the students and hotel owners was also held at the Deputy Commissioner's office the same afternoon.

Developments are under watch and the situation is reported to be peaceful.

Sri V. N. PATIL.—As per the information we have, it is clear that the General Secretary of the Students' Union had head injuries. We wanted to know his condition and of other students who were injured. There is no mention about it. What steps the Government have taken to see that the prices of eatables are reduced?

Sri MANIKRAO PATIL.—It is the inherent duty of the Government to maintain law and order. When students gathered in unlawful assembly and tried to damage public property, the Bidar Police have used minimum force to disperse the mob. Under that process, one student who sustained minor injuries has been admitted to the Hospital and he is now improving. So far as the reduction of prices of eatables is concerned, Government have no control over that matter.

Discussion on a matter *re*: disturbances in Bangalore City.

† ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸಭಾಪತಿಗಳೇ, ಮೊನ್ನೆ ದಿವಸ ಗೃಹ ಮಂತ್ರಿಗಳು ಈ ಸಭೆಯಲ್ಲಿ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಬೆಂಗಳೂರು ಪಟ್ಟಣವಲ್ಲಿ ಇರುವ ಎಲ್ಲಾ ಭಾಷೆ ಮಾತನಾಡುವ ಜನಗಳು, ಮೈನಾರಿಟಿ ಆಗಲಿ ಮೆಜಾರಿಟಿ ಆಗಲೀ, ಎಲ್ಲರೂ ಮೈನಾರಿಟಿಗಳು, ಅವರಿಗೆ ಪ್ರೊಟೆಕ್ಷನ್ ಕೊಡುವುದು ಸರಕಾರದ ಧರ್ಮ, ಆ ರೀತಿ ಪ್ರೊಟೆಕ್ಷನ್ ಕೊಡಬೇಕೆಂದು ಇಲಾಖಾ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನಿನ್ನೆ ದಿವಸ ಮತ್ತೆ ಕನ್ನಡ ಚಳುವಳಿಗಾರರ ಹೆಸರಿನಲ್ಲಿ ಎಲ್ಲರ ಮನಸ್ಸಿಗೂ ವ್ಯಥೆಯನ್ನುಂಟುಮಾಡತಕ್ಕ ದುರ್ಘಟನೆ ನಡೆದಿದೆ. ಸುಬ್ರಮಣ್ಯ ನಗರದ ಹತ್ತಿರ ಪಿಲ್ ಕಾರ್ಖಾನೆ ಇದೆ. ಆ ಕಾರ್ಖಾನೆಯಲ್ಲಿ ಒಬ್ಬ ಬಡವನ ಮನೆಗೆ ನಿನ್ನೆ ಮಧ್ಯಾಹ್ನ ಒಂದೂವರೆ ಗಂಟೆಯ ಸಮಯದಲ್ಲಿ ಬೆಂಕಿ ಹಚ್ಚಿದ್ದರಿಂದ ಕಟ್ಟಿಹಾಕಿದಂಥ ಒಂದು ಎಮ್ಮೆಗೆ ಬೆಂಕಿ ಬಿದ್ದು ಅದು ಸ್ಥಳದಲ್ಲಿಯೇ ಮೃತವಾಗಿದೆ ಅಥವಾ ಸಾಯುವುದರಲ್ಲಿ ಇದೆ. ಇವೇ ರೀತಿ ಇನ್ನೊಂದು ಹಸುವಿಗೂ ಕೂಡ ಬೆಂಕಿ ತಗುಲಿದ್ದರೂ ಅದು ಬದುಕಿಕೊಂಡಿದೆ. ಕೂಲಿಗಾತರು ಸಾವಿರಾರು ರೂಪಾಯಿ ಸಾಲ ಮಾಡಿ ಎಮ್ಮೆ ತಂದಿದ್ದರೆ